# ವಚನ ಸಾಹಿತ್ಯದಲ್ಲಿ ಜೀವನ ಧರ್ಮ

***Dr.Gundanna.C.Kalaburgi**

ಧರ್ಮ ಎಂಬ ಶಬ್ದ ವಿವಿಧ ರೀತಿಯ ಅರ್ಥಗಳನ್ನು ಕೊಡುತ್ತ ಬಂದಿದೆ. ಧಾರಣ ಮಾಡಿದುದು, ನ್ಯಾಯ, ಕರ್ತವ್ಯ, ಪುಣ್ಯ, ಸ್ವಭಾವ, ಯಮ, ಯಮಧರ್ಮ, ಪುಕ್ಕಟೆ, ಧರ್ಮ, ಅಹಿಂಸೆಯೆ ಪರಮಧರ್ಮ, ಬಸವಧರ್ಮದಲ್ಲಿ ದಯೆಯೆ ಧರ್ಮದ ಮೂಲ, ಬೌದ್ಧಧರ್ಮದಲ್ಲಿ ಧಮ್ಮ, ಧಮ್ಮವು ಪ್ರಜ್ಞೆ, ಶೀಲ ಮತ್ತು ಕರುಣೆಯಿಂದ ಕೂಡಿದೆ. ಸಂಸ್ಕೃತದ ಧರ್ಮ ಪದವನ್ನು ಅವರು ಒಪ್ಪುವುದಿಲ್ಲ. ಧರ್ಮವು ಪಾಲಿ ಭಾಷೆಗೆ ತದ್ಭವಗೊಂಡು ಧಮ್ಮ ಆಗುವ ಮೂಲಕ ಬೌದ್ಧ ಧರ್ಮದ ಒಟ್ಟು ಆಶಯಗಳ ಸಂಕೇತವಾಗಿ ನಿಲ್ಲುತ್ತದೆ. ಬಹುಜನ ಸುಖಾಯ, ಬಹುಜನ ಹಿತಾಯ ಎಂಬ ಘೋಷವಾಕ್ಯವನ್ನು ಬೌದ್ಧ ಧರ್ಮ ಹೊಂದಿದೆ.

ಧಮ್ಮ ಎಂಬುದು ಬೌದ್ಧಧರ್ಮದ ಪಾರಿಭಾಷಿಕ ಶಬ್ದವಾಗಿದೆ. ನೀರಿನ ಗುಣಧರ್ಮ, ಬೆಂಕಿಯ ಗುಣಧರ್ಮ, ಮನೋಧರ್ಮ, ಸಹಧರ್ಮಿನಿ ಎಂದೂ ಧರ್ಮ ಶಬ್ದವನ್ನು ಬಳಸಲಾಗುತ್ತಿದೆ. ಧರ್ಮ ಎಂಬ ಶಬ್ದವನ್ನು ದಾನಕ್ಕೂ ಸಂಬಳಕ್ಕೂ ಬಳಸಲಾಗುತ್ತಿದೆ. ಕರುಣೆ ಎಂಬ ಅರ್ಥದಲ್ಲೂ ಬಳಸುತ್ತಾರೆ.

ಅಹಿಂಸೆ, ಶಾಂತಿ, ಸಮಾನತೆ, ನಮ್ರತೆ, ಜೀವಕಾರುಣ್ಯ, ಕ್ರಿಯಾಶೀಲರಾಗಿ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಮನಸ್ಥಿತಿ ಮುಂತಾದವುಗಳ ಹಿನ್ನೆಲೆಯೊಂದಿಗೆ ವಚನಕಾರರು ಧರ್ಮ ಶಬ್ದದ ಪ್ರಯೋಗ ಮಾಡಿದ್ದಾರೆ.

ತೀರ್ಥಂಕರರು ದೇವತ್ವವನ್ನು ಪಡೆಯುತ್ತಾರೆ ಎಂದು ಜೈನರು ಹೇಳುತ್ತಾರೆ. ದೇವರ ವಿಚಾರದಲ್ಲಿ ಬುದ್ಧ ಮೌನವಾಗಿದ್ದಾನೆ. ಹಿಂದು ಧರ್ಮ 33 ಕೋಟಿ ದೇವತೆಗಳ ಬಗ್ಗೆ ಹೇಳುತ್ತದೆ. ಯಹೂದಿ, ಪಾರ್ಸಿ, ಕ್ರೈಸ್ತ, ಇಸ್ಲಾಂ, ಲಿಂಗಾಯತ ಮತ್ತು ಸಿಖ್ ಧರ್ಮಗಳು ಏಕದೇವೋ ಪಾಸನೆಯ ಧರ್ಮಗಳಾಗಿವೆ. ದೇವನೊಬ್ಬ ನಾಮ ಹಲವು ಎಂದು ಬಸವಣ್ಣನವರು ಹೇಳುವ ಮೂಲಕ ಮತ್ತು ಆ ದೇವರನ್ನು ದಯೆಗೆ ಸಮೀಕರಿಸಿ ದಯೆಯೆ ಧರ್ಮದ ಮೂಲ ಎಂದು ಸಾರುವುದರ ಮೂಲಕ ಎಲ್ಲದರ ಮೂಲ ಒಂದೇ ಎಂದು ಸೂಚಿಸಿದ್ದಾರೆ. ಬಸವಧರ್ಮವು ಭಾರತದ ಮೊದಲ ಏಕದೇವೋಪಾಸನೆಯ ಧರ್ಮವಾಗಿದೆ. ಆದರೆ ಬಸವಣ್ಣನವರು ದೇವರೇ ಧರ್ಮದ ಮೂಲ ಎಂದು ಹೇಳಲಿಲ್ಲ. ದಯೆಯೆ ಧರ್ಮದ ಮೂಲವೆಂದು ಹೇಳಿದರು. ದೇವರನ್ನು ದಯೆಗೆ ಸಮೀಕರಿಸುವ ಮೂಲಕ ಎಲ್ಲ ಧರ್ಮಗಳ ಮೂಲ ದಯೆ ಎಂದು ಸಾರಿದರು.

ಆ ದಯೆಯೆ ದೇವರಾಗಿರುವುದರಿಂದ ದೇವರಿಗಿಂತ ದೊಡ್ಡ ಧರ್ಮಗಳು ಇರಲು ಸಾಧ್ಯವಿಲ್ಲ. ದೇವರು ಒಬ್ಬನೇ ಆಗಿರುವುದರಿಂದ ಜಗತ್ತಿನ ಯಾವುದೇ ಧರ್ಮ ಇನ್ನೊಂದು ಧರ್ಮಕ್ಕಿಂತ ದೊಡ್ಡದಾಗಿರಲು ಸಾಧ್ಯವಿಲ್ಲ. ದಯೆಯೆ ಮೂಲವಾಗಿರುವುದರಿಂದ ದಯೆ ಇಲ್ಲದೆ ಧರ್ಮ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ.

ದೇವನೊಬ್ಬ ನಾಮ ಹಲವು ಆಗಿದ್ದರೂ ಎಲ್ಲ ಧರ್ಮಗಳು ತಮ್ಮ ತಮ್ಮ ಧಾರ್ಮಿಕ ನಂಬಿಕೆಗಳ ಪ್ರಕಾರ ವರ್ಣನೆ ಮಾಡುತ್ತವೆ. ಆದರೆ ತಮ್ಮ ತಮ್ಮ ನಂಬಿಕೆಯ ಪ್ರಕಾರ ದಯೆಯ ವರ್ಣನೆ ಮಾಡಲಿಕ್ಕಾಗದು. ಹೀಗೆ ಬಸವಣ್ಣನವರು ದಯೆಯ ಮೂಲಕ ದೇವರನ್ನು ಜಾಗತೀಕರಣಗೊಳಿಸಿದ್ದಾರೆ! ಆದ್ದರಿಂದ ದಯೆಯ ಜಾಗತೀಕರಣವಾಗಬೇಕೇ ಹೊರತು ಕ್ರೌರ್ಯದ, ಶೋಷಣೆ ಮತ್ತು ಜನಾಂಗಭೇದಗಳ ಜಾಗತೀಕರಣವಾಗಬಾರದು. ದಯೆಯ ಮೂಲಾಧಾರದೊಂದಿಗೆ ಇಡೀ ಮಾನವಕುಲ ಒಂದಾಗಿ ಸಕಲಜೀವಾತ್ಮರಿಗೆ ಲೇಸನೆ ಬಯಸುವ ಅರಿವಿನೊಂದಿಗೆ ಕ್ರಿಯಾಶೀಲವಾಗಬೇಕು. ಆಗ ಮಾತ್ರ ಉಗ್ರಗಾಮಿಗಳು, ಮೂಲಭೂತವಾದಿಗಳು ಮತ್ತು ಶೋಷಕರು ಇಲ್ಲವಾಗಿ ಇಡೀ ವಿಶ್ವದಲ್ಲಿ ಕಲ್ಯಾಣರಾಜ್ಯದ ಉದಯವಾಗುವುದು.

ವಿಶ್ವದ ಜನರು ತಮ್ಮ ತಮ್ಮ ಧರ್ಮಗಳ ಮೂಲ ದಯೆ ಎಂಬ ಸತ್ಯವನ್ನು ಅರಿತಾಗ ಮಾತ್ರ ಕಲ್ಯಾಣರಾಜ್ಯದ ಸ್ಥಾಪನೆಯಾಗುವುದರಲ್ಲಿ ಸಂಶಯವಿಲ್ಲ. ಆದರೆ ವರ್ತಮಾನದಲ್ಲಿ ಧರ್ಮಗಳು ಹಿಂಸೆಗೆ, ಶೋಷಣೆಗೆ, ಕೋಮುಗಲಭೆಗಳಿಗೆ, ಜಾತಿಸಂಘರ್ಷಗಳಿಗೆ ಮತ್ತು ಯುದ್ಧಗಳಿಗೆ ಕಾರಣೀಭೂತವಾಗುವುದು ವಿಪರ್ಯಾಸವಾಗಿದೆ. ಅಂತೆಯೆ ಬಸವಣ್ಣನವರು ದಯೆಯೆ ಧರ್ಮದ ಮೂಲ ಎಂದು ಹೇಳಿದ್ದನ್ನು ಇಂದಿನ ಪೋಪ ಫ್ರಾನ್ಸಿಸ್ ವ್ಯಾಟಿಕನ್‌ನಲ್ಲಿ ದಯವೇ ಧರ್ಮ ಎಂದು ಘೋಷಿಸಿದ್ದಾರೆ. ಆ ಮೂಲಕ ಯುದ್ಧ ಮತ್ತು ಜನಾಂಗಿಯ ಘರ್ಷಣೆಗಳನ್ನು ವಿರೋಧಿಸಿದ್ದಾರೆ.

ಲಿಂಗದೇವನೆ ಕರ್ತ, ಶಿವಭಕ್ತನೆ ಶ್ರೇಷ್ಠ
ಕೊಲ್ಲದಿರ್ಪುದೆ ಧರ್ಮ,
ಅಧರ್ಮದಿಂದ ಬಂದುದನೊಲ್ಲದಿರ್ಪುದೆ ನೇಮ,
ಅಳುಪಿಲ್ಲದಿರ್ಪುದೆ ವ್ರತ.
ಇದೇ ಸತ್ಪಥ, ಉಳಿದುದೆಲ್ಲ ಮಿಥ್ಯವೆಂದೆ ಕಾಣಾ,
ದೇವರಾಯ ಸೊಡ್ಡಳಾ.

- ಸೊಡ್ಡಳ ಬಾಚರಸ

ಲಿಂಗದೇವನೆ ಜಗನ್ನಿಯಾಮಕ, ಇದನ್ನರಿತ ಭಕ್ತನೇ ಶ್ರೇಷ್ಠ, ದಯವೇ ಧರ್ಮ, ಅನ್ಯಾಯದಿಂದ ಬಂದುದನ್ನು ತಿರಸ್ಕರಿಸುವುದೇ ನೇಮ. ಸಮರ್ಪಣಾಭಾವವೇ ವ್ರತ. ಇವೆಲ್ಲವನ್ನು ಒಳಗೊಂಡು ಜೀವನಪಥವೇ ಸತ್ಪಥ. ಈ ಸನ್ಮಾರ್ಗ ಬಿಟ್ಟರೆ ಇನ್ನುಳಿದುದೆಲ್ಲವೂ ಅಸತ್ಯ ಎಂಬುದು ಸೊಡ್ಡಳ ಬಾಚರಸರ ದೃಢ ನಿಲವಾಗಿದೆ. ಹೀಗೆ ಧರ್ಮ ಎಂಬುದು ಇಂಥ ಘನತೆವೆತ್ತ ನಡವಳಿಕೆಯಿಂದ ಕೂಡಿರುತ್ತದೆ. ಇಂಥ ನೇಮ ಮತ್ತು ವ್ರತಗಳು ಧರ್ಮದ ಭಾಗವಾಗೇ ಇವೆ. ಆದ್ದರಿಂದಲೇ ಶರಣರು ಮಂದಿರಗಳೊಳಗಿನ ದೇವ ದೇವಿಯರ ಪೂಜೆ ಮಾಡುವುದಿಲ್ಲ. ಆದರೆ ತಮ್ಮೊಳಗಿನ ದೇವರ ಜೊತೆ ಸದಾ ತಲ್ಲೀನವಾಗಿರುತ್ತಾರೆ.

ಎಲ್ಲೆಲ್ಲಿಯ ಪ್ರಾಣಿಯ ಕೊಲ್ಲದಿಹುದೆ ಧರ್ಮ,
ಒಲ್ಲದಿಪ್ಪುದೇ ತಪ,
ಪರವಧುನ ಆಸೆ ತನ್ನ ಮನದಲ್ಲಿ ಇಲ್ಲದಿರ್ದಡೆ,
ದೇವ ತಾನಲ್ಲಿಯೇ ಎಂದ ಕಲಿದೇವಯ್ಯ

–ಮಡಿವಾಳ ಮಾಚಿದೇವ

ದಯವೇ ಧರ್ಮ, ಐಹಿಕ ಆಸೆಗಳಿಂದ ವಿಮುಖವಾಗುವುದೇ ತಪ, ಪರಸತಿಯನ್ನು ಬಯಸದೆ ಇರುವವರ ಮನದಲ್ಲೇ ದೇವರ ದಾಸ ಎಂದು ಮಡಿವಾಳ ಮಾಚಿದೇವರು ಮನೋಜ್ಞವಾಗಿ ಹೇಳಿದ್ದಾರೆ. ಹೀಗೆ ಧರ್ಮವು ಚಾರಿತ್ರ ಮತ್ತು ಮಾನವ ಏಕತೆಯನ್ನು ಬಯಸುವಂತದ್ದಾಗಿರಬೇಕು. ವಸ್ತುಮೋಹದಿಂದ ದೂರಾಗಿ ಒಂದಾಗಿರಿ ಮತ್ತು ಪವಿತ್ರರಾಗಿರಿ ಎಂಬ ಸಂದೇಶವನ್ನು ಈ ವಚನ ಹೊಂದಿದೆ.

ಶಿವನೇ ದೈವ, ಶಿವಭಕ್ತನೇ ಕುಲಜ, ಷಡಕ್ಷರವೇ ಮಂತ್ರ,
ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದುದ ಒಲ್ಲದಿಪ್ಪುದೇ ನೇಮ,
ಆಶೆ ಇಲ್ಲದಿಪ್ಪುದೇ ತಪ, ದೋಷಲ್ಲದಿಪ್ಪುದೇ ಜಪ,
ವಂಚನೆ ಇಲ್ಲದಿಪ್ಪುದೇ ಭಕ್ತಿ,
ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ,
ಇದು ಸತ್ಯ, ಶಿವ ಬಲ್ಲ, ಶಿವನಾಣೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

–ಉರಿಲಿಂಗಪೆದ್ದಿ

ದೇವನೊಬ್ಬನೆ, ಆ ದೇವರ ಭಕ್ತನೇ ಪವಿತ್ರಾತ್ಮ, ಓಂ ನಮಃ ಶಿವಾಯ ಎಂಬುದೇ ಮಂತ್ರ( ಕೆಲವು ವಚನಕಾರರು ಪಂಚಾಕ್ಷರವೇ ಮಂತ್ರ ಎಂದು ಹೇಳುತ್ತಾರೆ) ದಯೆಯೆ ಧರ್ಮ, ಅನ್ಯಾಯದ ಸಂಪತ್ತು ಬೇಡ ಎಂಬುದೇ ನೇಮ. ಐಹಿಕ ಆಸೆಗಳಿಂದ ದೂರವಾಗಿರುವುದೇ ತಪಸ್ಸು. ಶಾಂತವಾಗಿರುವುದೇ ಜಪ. ಸಾಧ್ಯವಾದಷ್ಟು ನೀತಿ ನಿಯಮಗಳಿಂದ ಬದುಕುವುದೇ ಧಾರ್ಮಿಕ ಆಚರಣೆ. ದೇವರ ಸಾಕ್ಷಿಯಾಗಿ ಇದುವೇ ಸತ್ಯ ಎಂದು ಉರಿಲಿಂಗಪೆದ್ದಿಗಳು ಹೇಳುವ ಮೂಲಕ, ಎಲ್ಲ ಆಮಿಷಗಳನ್ನು ಮತ್ತು ರೋಷ ದ್ವೇಷಗಳನ್ನು ಗೆಲ್ಲುತ್ತ ಮಾನವೀಯತೆಯ ಕಡೆಗೆ ಒಯ್ಯುವಂಥದ್ದೇ ಧರ್ಮ ಎಂಬುದನ್ನು ಸೂಚಿಸಿದ್ದಾರೆ.

ಕೊಂಬೆಯ ಮೇಲಣ ಮರ್ಕಟದಂತೆ ಲಂಘಿಸುವುದೆನ್ನ ಮನವು,
ನಿಂದಲ್ಲಿ ನಿಲಲೀಯದೆನ್ನ ಮನವು,
ಹೊಂದಿದಲ್ಲಿ ಹೊಂದಲೀಯದೆನ್ನ ಮನವು,
ಕೂಡಲಸಂಗಮದೇವಾ
ನಿಮ್ಮ ಚರಣಕಮಲದಲಿ ಭ್ರಮರನಾಗಿರಿಸು, ನಿಮ್ಮ ಧರ್ಮ.

–ಬಸವಣ್ಣ

ಧರ್ಮ ಎಂಬುದು ಬಾಹ್ಯಾಚರಣೆಗೆ ಸೀಮಿತವಾಗಿಲ್ಲ. ಧಾರ್ಮಿಕ ಸಂಪ್ರದಾಯಗಳೇ ಧರ್ಮವಾದಾಗ ಎಂಥ ಅನಾಹುತಗಳನ್ನು ಎದುರಿಸಬೇಕಾಗುತ್ತದೆ ಎಂಬುದಕ್ಕೆ ಭಾರತದ ಇಂದಿನ ಸ್ಥಿತಿಯೇ ಸಾಕ್ಷಿಯಾಗಿದೆ. ದೇವರಲ್ಲಿ ಅಥವಾ ತಾವು ನಂಬಿದ ಮಹೋನ್ನತ ನಂಬಿಕೆಯಲ್ಲಿ ಮನಸ್ಸನ್ನು ಏಕತ್ರಗೊಳಿಸುವುದರ ಮೂಲಕ ಅದರ ಮೇಲೆ ಪ್ರಭುತ್ವ ಸಾಧಿಸಿದಾಗ ಮಾತ್ರ ನಮ್ಮ ಮನಸ್ಸಿನಲ್ಲಿ ಧರ್ಮ ಕುಡಿಯೊಡೆಯುತ್ತದೆ. ಜೀವನ ಪರ್ಯಂತ ಆ ಧರ್ಮ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಅರಿವನ್ನು ಮೂಡಿಸುತ್ತಲೇ ಕ್ರಿಯಾಶೀಲವಾಗುವ ಚೈತನ್ಯವನ್ನು ನೀಡುವುದು. ಹೀಗೆ ಬಸವಣ್ಣನವರು ಹೇಳುವ ಏಕಾಗ್ರತೆಯಲ್ಲಿ ಇಡೀ ಜಗತ್ತಿಗೆ ಬೇಕಾದ ಕಾಳಜಿ ಸೃಷ್ಟಿಯಾಗುತ್ತದೆ. ಕ್ರಿಯಾಶೀಲತೆಯ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಆತ್ಮೋದ್ಧಾರದ ಇಷ್ಟಲಿಂಗವು ಲೋಕೋದ್ಧಾರದ ಜಂಗಮಲಿಂಗವಾಗಿ ನಮ್ಮನ್ನು ಮುನ್ನಡೆಸುತ್ತದೆ.

ಆಕಳ, ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ ಧರ್ಮ!
ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ!
ಅರಸಾಡದಿರಿಂ ಭೋ, ನಿಮ್ಮ ಧರ್ಮ!
ಅಲ್ಲಿ ಉಂಬಡೆ ಸಂಗ, ಇಲ್ಲಿ ಉಂಬಡೆ ಸಂಗ,
ಕೂಡಲಸಂಗಮದೇವ ಏಕೋಭಾವ.

–ಬಸವಣ್ಣ

ಇಡೀ ವಿಶ್ವ ಶಿವಮಯವಾಗಿರುವ ಸತ್ಯದ ಅನುಭಾವವಾದಾಗ, ಆ ಅನುಭಾವಿಯು ಶಿವಸ್ವರೂಪಿಯಾಗಿ ಲೋಕವೇ ತಾನು ಎಂಬ ಸತ್ಯವನ್ನು ಅರಿಯುತ್ತಾನೆ. ಎಲ್ಲೆಲ್ಲೂ ಶಿವನನ್ನೇ ಕಾಣುತ್ತಾನೆ. ಎಲ್ಲವೂ ಶಿವಮಯವಾದಾಗ ಕಳ್ಳತನದ ಪ್ರಶ್ನೆಯೆ ಇರುವುದಿಲ್ಲ ಎಂಬುದನ್ನು ಬಸವಣ್ಣನವರು ಒಂದು ರೂಪಕದ ಮೂಲಕ ತಿಳಿಹೇಳುತ್ತಾರೆ.

ಆಕಳು ಕಳ್ಳತನವಾದಾಗ ಕೂಗಾಡಬೇಡಿರಿ, ಹುಡುಕಾಡ ಬೇಡಿರಿ ಎಲ್ಲರ ಒಳಗೆ ಶಿವನೇ ಇರುವುದರಿಂದ ಆ ಆಕಳ ಹಾಲನ್ನು ಯಾರೇ ಸೇವಿಸಿದರು ಶಿವನಿಗೇ ಅರ್ಪಿತವಾಗುತ್ತದೆ ಎಂದು ಹೇಳುತ್ತಾರೆ. ಇದರ ತಾತ್ಪರ್ಯವು ಸಾಮಾಜಿಕವಾಗಿದೆ. ಇಲ್ಲಿ ಬಸವಣ್ಣನವರು ಕಳ್ಳತನವನ್ನು ಬೆಂಬಲಿಸುತ್ತಿಲ್ಲ. ಕಳ್ಳತನಕ್ಕೆ ಕಾರಣವಾಗುವ ಸಂಪತ್ತಿನ ಶೇಖರಣೆಯ ಬಗ್ಗೆ ಎಚ್ಚರಿಸುತ್ತಾರೆ. ಧರ್ಮ ಎಂಬುದು ಸಮಾನತೆಯ ಮೇಲೆ ನಿಂತಾಗ ಮಾತ್ರ ದಯೆಯು ಸಾರ್ವತ್ರಿಕವಾಗುತ್ತದೆ ಎಂಬ ಸಂದೇಶವನ್ನು ಈ ವಚನ ಒಳಗೊಂಡಿದೆ.

ಗುರುಭಕ್ತನಾದಲ್ಲಿ ಘಟಧರ್ಮವಳಿದು
ಲಿಂಗಭಕ್ತನಾದಲ್ಲಿ ಮನಸಂಚಲ ನಿಂದು
ಜಂಗಮಭಕ್ತಿಯಲ್ಲಿ ಧನದಾಸೆಯಳಿದು
ತ್ರಿವಿಧಾಂಗ ಸಲೆ ಸಂದು ತ್ರಿಕರಣ ಶುದ್ಧನಾಗಿದ್ದವಂಗೆ
ಮರ್ತ್ಯ ಕೈಲಾಸವೆಂಬ ಕಾಳುಮಾತಿಲ್ಲ.
ಆತ ನಿಶ್ಚಿಂತ ನಿಜಮುಕ್ತನಯ್ಯಾ ರಾಮನಾಥ.
–ಜೇಡರ ದಾಸಿಮಯ್ಯ

ದೇಹಧರ್ಮವು ಕಾಮ, ಕ್ರೋಧ, ಮದ, ಮತ್ಸರ, ಮೋಹ, ಲೋಭ ಮುಂತಾದ ಪ್ರವೃತ್ತಿಗಳನ್ನು ಹೊಂದಿದೆ. ನಿಜವಾದ ಗುರುಭಕ್ತನು ಈ ಪ್ರವೃತ್ತಿಗಳಿಂದ ಮುಕ್ತನಾಗುವನು. ಆತ ಲಿಂಗಭಕ್ತನಾಗುವ ಮೂಲಕ ಮನಸ್ಸನ್ನು ಹತೋಟಿಗೆ ತಂದು ಅದನ್ನು ವಿಶ್ವಮಯಗೊಳಿಸುವನು. ಸಕಲಜೀವಾತ್ಮರ ಬಗೆಗಿನ ಜೀವಕಾರುಣ್ಯದಿಂದಾಗಿ ಸಂಪತ್ತು ಎಂಬುದು ಎಲ್ಲರ ಸೊತ್ತು ಎಂಬ ಭಾವ ತಾಳಿ ಅದರ ಮೇಲೆ ವೈಯಕ್ತಿಕ ಹಕ್ಕನ್ನು ಸಾಧಿಸುವ ಬಯಕೆಯಿಂದ ಮುಕ್ತನಾಗುತ್ತಾನೆ. ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ತನುತ್ರಯಗಳನ್ನು ಒಳಗೊಂಡು ಕಾಯಾ ವಾಚಾ ಮನಸಾ ಎಂಬ ತ್ರಿಕರಣಗಳಿಂದ ಶುದ್ಧವಾಗಿದ್ದವನಿಗೆ ಮರ್ತ್ಯ ಲೋಕ ಮತ್ತು ಸ್ವರ್ಗಲೋಕ ಎಂಬ ಭೇಧ ಇರುವುದಿಲ್ಲ. ಆತ ಸ್ಥಿತಪ್ರಜ್ಞ ಮತ್ತು ಸ್ಥಿತಿಪ್ರಜ್ಞನಾಗಿ ಜೀತಾವಧಿಯಲ್ಲೇ ಮುಕ್ತಿಯನ್ನು ಸಾಧಿಸಿರುತ್ತಾನೆ.

ನೋಟದ ಭಕ್ತಿ ಬಸವನಿಂದಾಯಿತ್ತು.
ಕೂಟದ ಜ್ಞಾನ ಬಸವನಿಂದಾಯಿತ್ತು ಕಾಣಾ;
ಎಲ್ಲಿಯ ಶಿವಜ್ಞಾನ, ಎಲ್ಲಿಯ ಮಾಟಕೂಟ ಬಸವನಲ್ಲದೆ?
ಮಹಾಜ್ಞಾನ, ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯ.
–ಸಿದ್ದರಾಮೇಶ್ವರ

ಬಸವಣ್ಣನವರು ಅಕ್ಕ ಹೇಳಿದಂಥ ಒಳನೋಟದ ಭಕ್ತಿಯನ್ನು ಕೊಟ್ಟಿದ್ದಾರೆ. ಲಿಂಗಾಂಗಸಾಮರಸ್ಯದ ಜ್ಞಾನವನ್ನು ಕೊಟ್ಟಿದ್ದಾರೆ. ಬಸವಣ್ಣನವರು ಈ ಅರಿವನ್ನು ಮೂಡಿಸದಿದ್ದರೆ ನಮಗೆ ಶಿವಜ್ಞಾನವಾಗಲೀ ಲಿಂಗಾಂಗಸಾಮರಸ್ಯದ ಅರಿವಾಗಲೀ ಮೂಡುತ್ತಿರಲಿಲ್ಲ. ಆದ್ದರಿಂದ ಇದು ಮಹಾಜ್ಞಾನಿ ಮತ್ತು ಮಹಾಪ್ರಕಾಶವಾದ ಬಸವಣ್ಣನ ಧರ್ಮ ಎಂದು ಸಿದ್ಧರಾಮೇಶ್ವರರು ಸಾರಿದ್ದಾರೆ.

ಆಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ!
ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದಡೆ,
ಕೂಡಲಸಂಗಮದೇವಾ
ನೀ ಸಾಕ್ಷಿಯಾಗಿ ಛೀ ಎಂಬೆನು.

ಧರ್ಮವು ನಮ್ಮಲ್ಲಿ ಸಾಕ್ಷಿಪ್ರಜ್ಞೆಯನ್ನು ಮೂಡಿಸುವಂಥದ್ದು, ಆದ್ದರಿಂದ ಧರ್ಮದ ತತ್ತ್ವಗಳಿಗೆ ಶರಣೆನ್ನಬೇಕು. ಆದರೆ ಆ ತತ್ತ್ವಗಳಂತೆ ಆಚರಣೆ ಇಲ್ಲದಿದ್ದಡೆ ದೇವ ಸ್ವರೂಪವಾದ ಅವುಗಳ ಸಾಕ್ಷಿಯಾಗಿ ಛೀ ಎನ್ನಬೇಕು ಎಂಬುದು ಬಸವಣ್ಣನವರ ದೃಢನಿರ್ಧಾರವಾಗಿದೆ. ಹೀಗೆ ಧರ್ಮವನ್ನು ಸದಾ ಜಾಗೃತವಾಗಿ ಮತ್ತು ಕ್ರಿಯಾಶೀಲವಾಗಿ ಉಳಿಸಿಕೊಂಡಾಗ ಮಾತ್ರ ಮೂಲಭೂತವಾದಿಗಳು, ಉಗ್ರಗಾಮಿಗಳು, ಮತ್ತು ಜಾತಿವಾದಿಗಳು ತಲೆ ಎತ್ತದಂತೆ ತಡೆಯಬಹುದು.

ಸುಖ ದುಃಖಗಳು ಪುಣ್ಯ ಮತ್ತು ಪಾಪದ ಫಲಗಳಲ್ಲ. ನಮ್ಮ ದೈನಂದಿನ ಬದುಕಿಗೆ ದೇವರು ಜವಾಬ್ದಾರರಲ್ಲ. ನಮಗೆ ಕೊಟ್ಟಿರುವ ಕೈ ಕಾಲು , ಹೃದಯ ಮತ್ತು ತಲೆಯನ್ನು ಬಳಸಿಕೊಳ್ಳದೆ ಎಲ್ಲವೂ ಹಣೆಬರಹ ಎಂದು ಹೇಳುತ್ತ ಉದಾಸೀನ ಪ್ರವೃತ್ತಿ ತಾಳುವುದು ಹೀನಾಯವಾದದು ಎಂದು ಸಾರಿದ್ದಾರೆ. ಹೀಗೆ ಹೇಳುವ ಮೂಲಕ ಕರ್ಮಸಿದ್ಧಾಂತವನ್ನು ತಿರಸ್ಕರಿಸಿ ಕಾಯಕ ಸಿದ್ಧಾಂತವನ್ನು ಪುರಸ್ಕರಿಸಿದ್ದಾರೆ. ಈ ತೆರನಾಗಿ ಬಸವಣ್ಣನವರು ಲಿಂಗವಂತ ಧರ್ಮದ ವ್ಯಾಖ್ಯಾನ ಮಾಡಿದ್ದಾರೆ.

ಆನೆ ಅಂಕುಶಕ್ಕೆ ಅಂಜುವುದೆ ಅಯ್ಯಾ?
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ
ಆನೀ ಬಿಜ್ಜಳಂಗಂಜುವೆನೆ ಅಯ್ಯಾ?
ಕೂಡಲಸಂಗಮದೇವಾ,
ನೀನು ಸರ್ವಜೀವದಯಾಪಾರಿಯಾದ ಕಾರಣ
ನಿನಗಂಜವೆನಲ್ಲದೆ.
–ಬಸವಣ್ಣ

ಜಗತ್ತು ಮಾನಸಿಕ ಗುಲಾಮಗಿರಿಯಿಂದ ಬಳಲುತ್ತದೆ. ಅದರ ಲಾಭವನ್ನು ಪ್ರಭುತ್ವ ಮತ್ತು ಸುಲಿಗೆಕೋರರು ಅನುಭವಿಸುತ್ತಿದ್ದಾರೆ. ಆನೆ ಅಂಕುಶಕ್ಕೆ ಅಂಜುವುದಿಲ್ಲ. ಆ ಅಂಕುಶ ಸಿಂಹದ ನಖವೆಂದು ನಂಬಿಸಿದ್ದರಿಂದ ಅದು ಮಾನಸಿಕ ಗುಲಾಮಗಿರಿಗೆ ಒಳಗಾಗಿ ಅಂಜುತ್ತದೆ. ಜನಸಮೂಹ ಎಂಬ ಆನೆ ಶೋಷಕ ಪ್ರಭುತ್ವವೆಂಬ ಅಂಕುಶಕ್ಕೆ ಅಂಜುವುದಿಲ್ಲ. ಆದರೆ ಅವರು ಶೋಷಣೆಗಾಗಿ ಸೃಷ್ಟಿಸಿದ ದೇವರಿಗೆ ಮತ್ತು ಧಾರ್ಮಿಕ ಕಟ್ಟಳೆಗಳಿಗೆ ಅಂಜುತ್ತದೆ. ಈ ಸತ್ಯವನ್ನು ಅರಿತ ಪ್ರಧಾನಿ ಬಸವಣ್ಣನವರು ರಾಜನಾದ ಬಿಜ್ಜಳನಿಗೆ ಅಂಜುವುದಿಲ್ಲ. ಆದರೆ ಸರ್ವಜೀವಗಳ ಬಗ್ಗೆ ದಯೆಯನ್ನು ಹೊಂದಿರುವ ದೇವರಿಗೆ ಮಾತ್ರ ಅಂಜುತ್ತಾರೆ. ಹೀಗೆ ಬಸವಣ್ಣನವರು ಏಕಕಾಲಕ್ಕೆ ಮಾನಸಿಕ ಗುಲಾಮಗಿರಿಯಿಂದ ಹೊರಬರುವ ಕ್ರಮವನ್ನೂ ನೀತಿಯನ್ನೂ ಅರುಹುತ್ತಾರೆ.

ಪುಣ್ಯಪಾಪವಿಲ್ಲಾಗಿ ಜನಪದ ಹಂಗಿಲ್ಲ
ಬಂದುದನುಂಬವಾಗಿ ಮಾನವರ ಹಂಗಿಲ್ಲ,
ಭವಗೆಟ್ಟನಾಗಿ ದೈವದ ಹಂಗಿಲ್ಲ.
ಸತ್ಯಜ್ಞಾನಾನಂದವೆ ತಾನಾಗಿ ಇನ್ನಾರ ಹಂಗಿಲ್ಲ.
ಇನ್ನಾರ ಹಂಗಿಲ್ಲದಾತ ಗುಹೇಶ್ವರಲ್ಲಯ್ಯನೊಬ್ಬನೆ!

- ಅಲ್ಲಮಪ್ರಭುದೇವರು

-

ಪುಣ್ಯದ ಆಸೆಯಿಲ್ಲದೆ ಮತ್ತು ಪಾಪದ ಭಯವಿಲ್ಲದೆ ಸತ್ಪಥದಲ್ಲಿ ನಡೆಯುವವರಿಗೆ ಜನನ ಮರಣಗಳ ಹಂಗಿಲ್ಲ. ಸ್ವಾವಲಂಬಿಗಳಿಗೆ ಬೇರೆಯವರ ಹಂಗಿಲ್ಲ. ಐಹಿಕ ಆಸೆಗಳಿಂದ ಮುಕ್ತನಾದವನಿಗೆ ದೇವರ ಹಂಗೂ ಇಲ್ಲ. ಸತ್ಯ ಮತ್ತು ಜ್ಞಾನದ ಆನಂದವೇ ತಾನಾದಾಗ ಯಾರ ಹಂಗೂ ಇರುವುದಿಲ್ಲ ಎಂದು ಅಲ್ಲಮಪ್ರಭುದೇವರು ಧರ್ಮದ ಮಾರ್ಗವನ್ನು ಸ್ಪಷ್ಟಪಡಿಸಿದ್ದಾರೆ.

ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು
ಒಕ್ಕುದು ಹಾರೈಸಿ, ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು
ಜೀವ ಹೋದಡೆ ಸಾಬಿ, ಇದಕ್ಕಾ ದೇವರ ಹಂಗೇಕೆ
ಭಾಪು ಲದ್ದೆಯ ಸೋಮಾ

–ಲದ್ದೆಯಾ ಸೋಮಣ್ಣ

ಅಲ್ಲಮಪ್ರಭುಗಳು ಹೇಳಿದ್ದನ್ನು ಹುಲ್ಲು ಮಾರುವ ಲದ್ದೆಯ ಸೋಮಣ್ಣ ಇನ್ನೊಂದು ರೀತಿಯಲ್ಲಿ ಮಾರ್ಮಿಕವಾಗಿ ಮತ್ತು ವಿಸ್ತಾರವಾಗಿ ಹೇಳಿದ್ದಾನೆ. ಮಾನವರು ಯಾವುದೇ ಕಾಯಕವನ್ನು ಮನಸ್ಸಿಗೆ ಹಚ್ಚಿಕೊಂಡು ಮಾಡಬೇಕು. ತಮ್ಮ ಕಾಯಕವನ್ನು ಮನಸ್ಸಿಲ್ಲದೆ ಮಾಡಿದಾಗ ಅದು ಆನಂದವನ್ನು ಕೊಡುವ ಬದಲಿಗೆ ಜುಗುಪ್ಸೆಗೆ ಕಾರಣವಾಗುತ್ತದೆ. ಪಾಲಿಗೆ ಬಂದ ಕಾಯಕವನ್ನು ನಿಷ್ಠೆಯಿಂದ ಸ್ವೀಕರಿಸಬೇಕು. ಆದ್ದರಿಂದ ಬಂದ ಪ್ರತಿಫಲವನ್ನು ಜ್ಞಾನಕ್ಕಾಗಿ, ಧರ್ಮತತ್ತ್ವಕ್ಕಾಗಿ ಮತ್ತು ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ವಿನಿಯೋಗಿಸಲು ತೆಗೆದಿಟ್ಟು ಉಳಿದುದನ್ನು ಮಾತ್ರ ಸ್ವಂತಕ್ಕೆ ಬಳಸಬೇಕು. ರೋಗ ರುಜಿನಗಳು ಬಂದರೆ ಒದರುವುದು, ಕಿರುಚುವುದು ಅನಿವಾರ್ಯ. ಸಾಯುವುದು ಅನಿವಾರ್ಯ. ಇವೆಲ್ಲ ಹುಟ್ಟಿನಿಂದ ಸಾಯುವವರೆಗಿನ ಜೈವಿಕ ಕ್ರಿಯೆಗಳಲ್ಲಿ ಬರುವಂಥವು. ಇದಕ್ಕಾಗಿ ದೇವರ ಮೊರೆ ಹೊಕ್ಕು ಆತನ ಹಂಗಿನಲ್ಲಿ ಕೂಡ ಬೀಳಬಾರದು ಎಂಬ ಜೀವನಧರ್ಮವನ್ನು ಲದ್ದೆಯ ಸೋಮಣ್ಣ ಈ ವಚನದಲ್ಲಿ ಆರುಹಿದ್ದಾನೆ. ಬಸವಧರ್ಮವು ಜೀವನಧರ್ಮವಾಗಿದೆ. ಹೀಗಾಗಿ ಅದು ನಿಸರ್ಗಧರ್ಮವೆಂದು ಕರೆಯಿಸಿಕೊಳ್ಳುತ್ತದೆ.

**ಪರಾಮರ್ಶನ ಗ್ರಂಥಗಳು**

ಶರಣಶ್ರೀ – ಎಂ.ಎಂ. ಕಲಬುರ್ಗಿ

ಅಲ್ಲಮನ ವಚನಗಳು – ಎಲ್. ಬಸವರಾಜು
ಅಕ್ಕನ ವಚನಗಳು – ಸಾ.ಶಿ. ಮರುಳಯ್ಯ
ಪ್ರಭುದೇವರ ಶೂನ್ಯಸಂಪಾದನೆ – ಎಲ್. ಬಸವರಾಜು
ವಚನ ಸಾಹಿತ್ಯ – ಎಂ. ಚಿದಾನಂದಮೂರ್ತಿ
ವಚನ ಮಾರ್ಗ – ಎಂ.ಎಂ. ಕಲಬುರ್ಗಿ
ಸಾಹಿತ್ಯದಲ್ಲಿ ಸ್ತ್ರೀವಾದ – ವೀಣಾ ಶಾಂತೇಶ್ವರ್
ವಚನ ಸಾಹಿತ್ಯ ಮತ್ತು ಮಹಿಳೆ – ಶೈಲಜಾ ಉಡಚಣ